# ನಮ್ಮ ವಿದ್ಯಾರ್ಥಿನಿಲಯದ ಸಂಕ್ಷಿಪ್ತ ಪರಿಚಯ

## ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ ಗೌರಿಬಿದನೂರು ಟೌನ್ ಚಿಕ್ಕಬಳ್ಳಾಪುರ ಜಿಲ್ಲೆ –562101

| | |
|---|---|
| ಪ್ರಾರಂಭವಾದ ವರ್ಷ ದಿನಾಂಕ | 2015–16 ನೇ ಸಾಲು ದಿನಾಂಕ: |
| ಸರ್ಕಾರಿ ಆದೇಶ ಸಂಖ್ಯೆ | ಎಂಡಬ್ಲ್ಯೂಡಿ 248 ಎಂಡಿಎಸ್ 213 ದಿನಾಂಕ:17–01–2014 |
| ಕಟ್ಟಡದ ವಿಸ್ತೀರ್ಣ | 200/100 |
| ಅಕ್ಷಾಂಶ–ರೇಖಾಂಶ | Lat N 13.604861' Long E 77.504961' |
| ಮಂಜೂರಾತಿಯಾದ | 50 |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 24 |
| ತರಗತಿ | ಪ್ರಥಮ ಪಿಯುಸಿ ಯಿಂದ ಉನ್ನತ ವ್ಯಾಸಂಗದವರೆಗೆ |
| ಮಾಧ್ಯಮ | – |




## :: ವಿವರಣೆ ::

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕು ಮಾದನಹಳ್ಳಿ ಕೆರೆಯ ಅಂಗಳದಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವು 2015–16ನೇ ಸಾಲಿನಿಂದ ಅಲ್ಪಸಂಖ್ಯಾತರ ಬಡಮಕ್ಕಳಿಗಾಗಿ ಪ್ರಾರಂಭಗೊಂಡು ಬಡ ವಿದ್ಯಾರ್ಥಿಗಳ ಪಾಲಿಗೆ ಕಾಮಧೇನುವಾಗಿ, ಅಮೃತ ಗಂಗೆಯಾಗಿ ವಿದ್ಯಾರ್ಥಿಗಳ ನೈತಿಕ ಭೌತಿಕ ಶಾರೀರಿಕ ಆಧ್ಯಾತ್ಮಕ ಸ್ಫರ್ಧಾತ್ಮಕ ಬೆಳವಣಿಗೆಯ ಹಿತದೃಷ್ಠಿಯಿಂದ ಉತ್ತಮ ಸೌಲಭ್ಯಯುತವಾದ ಮಾದರಿ ವಿದ್ಯಾರ್ಥಿ ನಿಲಯವಾಗಿ ಈ ವಿದ್ಯಾರ್ಥಿನಿಲಯ ಮಾದನಹಳ್ಳಿ ಕೆರೆಯ ಅಂಗಳದಲ್ಲಿ ಸದಾ ಹಸಿರಿನೊಂದಿಗೆ ಕಂಗೊಳಿಸುತ್ತದೆ.

ವಿದ್ಯಾರ್ಥಿಗಳ ಪ್ರತಿಭೆಯನ್ನು ಹೊರ ಸೆಳೆಯಲು ಹಾಗೂ ಅವರಲ್ಲಿ ವೇದಿಕೆಯನ್ನು ಬೆಳೆಸಿಕೊಳ್ಳಲು ಧೈರ್ಯ ತುಂಬುವುದರಿಂದ ಪ್ರತಿ ಶುಕ್ರವಾರ ಸಾಂಸ್ಕೃತಿಕ ಚಟುವಟಿಕೆಯ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತದೆ. ವಿದ್ಯಾರ್ಥಿಗಳ ಸದೃಢ ಆರೋಗ್ಯ ಮತ್ತು ಶಾರೀರಿಕವಾಗಿ ಉತ್ತಮವಾಗಿ ಮಾಡುವ ಸಲುವಾಗಿ ಕ್ರೀಡಾ ಸಾಮಾಗ್ರಿಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆಧುನಿಕ ಸಲಕರಣೆಗಳ ಮೂಲಕ ದೈಹಿಕ ಕಸರತ್ತು ನಡೆಸಲಾಗುತ್ತದೆ. ಶೈಕ್ಷಣಿಕ ಅಭಿವೃದ್ದಿಗಾಗಿ ಸುಸಜ್ಜಿತವಾದ ಗ್ರಂಥಾಲಯವನ್ನು ಹೊಂದಿದ್ದು, ವಿದ್ಯಾರ್ಥಿಗಳ ಅಗತ್ಯತೆಗೆ ತಕ್ಕಂತೆ ಪುಸ್ತಕ ಭಂಡಾರದ ವ್ಯವಸ್ಥೆ ಮಾಡಲಾಗಿರುತ್ತದೆ. ಈ ವಿದ್ಯಾರ್ಥಿನಿಲಯವು ವಿದ್ಯಾರ್ಥಿಗಳ ರಕ್ಷಣಾತ್ಮಕ ಹಿತದೃಷ್ಠಿಯಿಂದ ಸುತ್ತಲೂ ರಕ್ಷಣಾ ಗೋಡೆಯನ್ನು ಹೊಂದಿದ್ದು, ವಿದ್ಯಾರ್ಥಿನಿಲಯದ ಒಳಗೆ ಪ್ರವೇಶಿಸಿದಂತೆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದ ರೀತಿಯಲ್ಲಿ ಚಿತ್ರದುರ್ಗದ ಭದ್ರವಾದ ಕಲ್ಲಿನ ಕೋಟೆಯಂತೆ ವಿದ್ಯಾರ್ಥಿಗಳಿಗೆ ರಕ್ಷಣಾ ಕವಚವಾಗಿದೆ. ಜೊತೆಗೆ ವಿದ್ಯಾರ್ಥಿನಿಲಯಕ್ಕೆ ಎಲ್ಲಾ ವೇಳೆಯಲ್ಲಿ ಬೆಳಕಿನ ವ್ಯವಸ್ಥೆ ಒದಗಿಸುವ ಸಲುವಾಗಿ ಯುಪಿಎಸ್ ಮತ್ತು ಸೋಲಾರ್ ದೀಪಗಳ ವ್ಯವಸ್ಥೆಯಿಂದ ವಿದ್ಯಾರ್ಥಿನಿಲಯದ ಆವರಣವು ರಾತ್ರಿಯ ವೇಳೆಯಲ್ಲಿ ಮೈಸೂರಿನ ಅರಮನೆಯಂತೆ ಕಂಗೊಳಿಸುವ ಬೆಳಕಿನ ವ್ಯವಸ್ಥೆ ಹೊಂದಿದೆ.

ಈ ವಿದ್ಯಾರ್ಥಿನಿಲಯದ ಸುತ್ತಮುತ್ತಲೂ ಅಂದವಾದ ಮರಗಿಡಗಳನ್ನು ಹೊಂದಿದ್ದು, ಉತ್ತಮವಾದ ನಿಸರ್ಗದ ನಡುವೆ ವಿದ್ಯಾರ್ಥಿಗಳ ವಿಧ್ಯಾಭ್ಯಾಸಕ್ಕೆ ಉತ್ತಮ ವಾತಾವರಣವನ್ನು ಕಲ್ಪಿಸುವುದರೊಂದಿಗೆ ಗುರುಕುಲ ವ್ಯವಸ್ಥೆಯನ್ನು ತೆರೆದಿಡುವಂತಿದೆ. ವಿದ್ಯಾರ್ಥಿಗಳ ಆರೋಗ್ಯ ಮತ್ತು ಅವರಲ್ಲಿ ಉತ್ತಮ ವಾತಾವರಣ ನಿರ್ಮಿಸುವ ದೃಷ್ಠಿಯಿಂದ ಉಡುಪುಗಳನ್ನು ಹೊರತುಪಡಿಸಿ, ವಿದ್ಯಾರ್ಥಿಗಳ ದಿನಚರಿಗೆ ಬೇಕಾಗುವ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಉನ್ನತ ಮಟ್ಟದಲ್ಲಿ ಕಲ್ಪಿಸಲಾಗುತ್ತದೆ. ಈ ರೀತಿ ಇರುವುದರಿಂದ ವಿದ್ಯಾರ್ಥಿನಿಲಯವು ಅಂದ–ಚಂದವನ್ನು ತನ್ನಲ್ಲಿ ಅಡಗಿಸಿಕೊಂಡು ವಿದ್ಯಾರ್ಥಿಗಳನ್ನು ಕೈ ಬೀಸಿ ಕರೆಯುತ್ತಿದೆ.